ಮಾತನಾಡಿದ್ದೆವು! ಮರೆತ ಬಾಚಣಿಗೆಯನ್ನೇ ಹೋಲುವ ಬಾಚಣಿಗೆ ಇರಿಸಿಕೊಂಡವ... ಪುಗ್ಗೇರ ವಿಶು!

"ಹಾಗಿದ್ರೆ ನೆಕ್ಲೇಸ್ ನಾಪತ್ತೆಯ ಹಿಂದೆ ವಿಶುವಿನ ಕೈವಾಡವಿದೆ ಎಂಬುವುದರಲ್ಲಿ ಸಂಶಯವಿಲ್ಲ. ಆದರೆ, ಅದನ್ನು ಪತ್ತೆ ಮಾಡುವುದು ಹೇಗೆ?" ನಾನು ಪ್ರಶ್ನಿಸಿದೆ.

ಯಾವುದೋ ಆಲೋಚನೆಯಲ್ಲಿ ಮುಳುಗಿದ್ದಂತೆ ಇದ್ದ ಕರಮಚಂದ ತುಸು ತಡೆದು ಉತ್ತರಿಸಿದ,

"ರಾಖಿಯೊಂದಿಗೆ ಮಾತನಾಡಿದರೆ ಏನಾದರೂ ಸುಳಿವು ದೊರೆಯಬಹುದು. ಆಕೆಯೊಂದಿಗೆ ನಾನು ಮಾತನಾಡುತ್ತೇನೆ. ಬಿದ್ದಪ್ಪ, ನೀನೊಂದು ಮುಖ್ಯ ಕೆಲಸ ಮಾಡಬೇಕು. ಸಮೀಪದಲ್ಲಿರುವ ಆ ಅಂಗಡಿಗೆ ಹೋಗಿ, ಹುರಿಹಗ್ಗ ಖರೀದಿಸಿದ್ದು ಯಾರು ಎಂದು ತಿಳಿದುಕೊಂಡು ಬಾ. ಈ ಪ್ರಕರಣ ತಲೆಗೆ ಒಳ್ಳೇ ಕೆಲಸ ಕೊಡುತ್ತಿದೆ!"

ಹಾಗೆಂದು ಹೇಳಿ, ಆತ ಸಭಾಂಗಣದೊಳಕ್ಕೆ ತೆರಳಿದ. ನಾನು ಅಂಗಡಿಯ ಹಾದಿ ಹಿಡಿದೆ.

***

ಸುಮಾರು ಐದಾರು ನಿಮಿಷಗಳಲ್ಲಿ ನಾನು ಮುಖ್ಯ ರಸ್ತೆಗೆ ಬಂದೆ. ಅಲ್ಲೇ ರಸ್ತೆಯ ಆ ಪಕ್ಕ ದೊಡ್ಡದಾದ ಸೂಪರ್ ಮಾರ್ಕೆಟ್ ಕಾಣಿಸಿತು. ಆ ಮೂಲೆಯಲ್ಲೂ ಹವಾನಿಯಂತ್ರಿತ ಅಂಗಡಿ! ತಿರುಗು ಬಾಗಿಲು ಸರಿಸಿ, ಒಳಗಡಿಯಿರಿಸಿದೆ. ಸೂರಿನತ್ತ ದಿಟ್ಟಿಸಿದಾಗ, ಸಿಸಿಟೀವಿ ಕ್ಯಾಮೆರಾಗಳು ಕಣ್ಣಿಗೆ ರಾಚಿದವು! ರೋಮಾಂಚನವಾಯಿತು.

ಗಲ್ಲಾ ಪೆಟ್ಟಿಗೆಯಲ್ಲಿದ್ದ ವ್ಯಕ್ತಿಗೆ ಬಂದ ಉದ್ದೇಶ ಅರುಹಿದಾಗ, ಆತ ಅನುಮಾನದ ದೃಷ್ಟಿ ಬೀರಿದ. ನನ್ನ ವಿಸಿಟಿಂಗ್ ಕಾರ್ಡ್ ತೋರಿಸಿದರೂ ಆತ ತೃಪ್ತನಾಗಲಿಲ್ಲ. ಕಲ್ಯಾಣಮಂಟಪದಲ್ಲಿ ನಡೆದ ಘಟನೆಯನ್ನು ಸೂಕ್ಷ್ಮವಾಗಿ ತಿಳಿಸಿ, ಸಹಾಯ ಕೋರಿದ ಮೇಲೆ ಅತ ಸಹಕರಿಸಿದ. ಸಿಸಿಟೀವಿಯ ದೃಶ್ಯಾವಳಿಯಲ್ಲಿ ಕಣ್ಣು ಹರಿಸಿದಾಗ, ಹಗ್ಗ ಖರೀದಿಸಿದ ವ್ಯಕ್ತಿ ಬಯಲಾಗಿದ್ದ! ಕಪ್ಪು ಷರಟು ಧರಿಸಿದ್ದ ಆಸಾಮಿ. ಆತನನ್ನು ಕಲ್ಯಾಣಮಂಟಪದಲ್ಲಿ ಕಂಡ ನೆನಪಾಗಲಿಲ್ಲ. ಅಂಗಡಿಯಾತ ಇನ್ನಷ್ಟು ಮಾಹಿತಿ ನೀಡಿದ.

"ಸ್ವಲ್ಪ ಹೊತ್ತಿನ ಮುಂಚೆ ಆತ ಆ ವೈನ್ ಸ್ಟೋರಿನೊಳಕ್ಕೆ ಹೋಗಿದ್ದನ್ನು ಕಂಡೆ." ರಸ್ತೆಯ ಆ ಕಡೆಯಿದ್ದ ಅಂಗಡಿಯನ್ನು ತೋರಿದ.

"ಹೌದೇ? ಈಗಲೂ ಅಲ್ಲೇ ಇದ್ದಾನೆಯೆ?"

ಆತ ಹುಡುಗನೊಬ್ಬನನ್ನು ಕರೆದು, ವೈನ್ ಸ್ಟೋರ್ ಬಳಿ ಹೋಗಿ ನೋಡಲು ಸೂಚಿಸಿದ. ಐದಾರು ನಿಮಿಷಗಳಲ್ಲಿ ಹಿಂದಿರುಗಿದ ಹುಡುಗ ಆ ವ್ಯಕ್ತಿ ಒಳಗಿರುವುದನ್ನು ಖಚಿತಪಡಿಸಿದ.

ನೇರವಾಗಿ ಹೋಗಿ ಆತನನ್ನು ಹಿಡಿಯಲೇ? ಆದರೆ, ಯಾವ ಆರೋಪದ ಮೇಲೆ? ನನಗೆ ಅಧಿಕಾರವೆಲ್ಲಿದೆ? ಹಾಗಾಗಿ, ಆ ಯೋಚನೆ ಕೈಬಿಟ್ಟು, ಅಂಗಡಿಯಾತನಿಗೆ ಕೇಳಿದೆ, "ನನಗೊಂದು ಸಹಾಯ ಮಾಡಬಹುದೇ? ನಿಮ್ಮ ಹುಡುಗನನ್ನು ಆತನ ಮೇಲೆ ಕಣ್ಣಿರಿಸಲು ನಿಲ್ಲಿಸಬಹುದೇ? ನಾನೊಂದು ಹದಿನೈದು ನಿಮಿಷಗಳಲ್ಲಿ ಬರುತ್ತೇನೆ. ನನ್ನ ಸೀನಿಯರ್ ಒಬ್ಬರ ಹತ್ತಿರ ಮಾತಾಡುವುದಿದೆ."

ಆತ ಸಮ್ಮತಿಸಿದ. ನಾನು ಆತುರಾತುರವಾಗಿ ಕಲ್ಯಾಣಮಂಟಪದತ್ತ ದಾಪುಗಾಲು ಹಾಕಿದೆ.

***

ಕಲ್ಯಾಣಮಂಟಪ ಪ್ರವೇಶಿಸುವಾಗ ವಿಚಿತ್ರವೆನಿಸಿತು. ವಾದ್ಯದವರ ಸದ್ದೇ ಇಲ್ಲ. ಮದುವೆ ಮಂಟಪ ಖಾಲಿ! ಯಾರೋ ಗಟ್ಟಿಯಾಗಿ ಅಳುವ ದನಿ. ಮೆಲು ದನಿಯಲ್ಲಿ ಜನರೊಳಗೆ ಪರಸ್ಪರ ಚರ್ಚೆ. ಕರಮಚಂದ ಮೂಲೆಯಲ್ಲಿ ಚರವಾಣಿ ಹಿಡಿದು ಯಾರೊಂದಿಗೋ ಮಾತನಾಡುತ್ತಿದ್ದ. ನಾನು ಅತನ ಸನಿಹ ಕಾದು ನಿಂತೆ.

"ಅವರು ಹೆಚ್ಚು ದೂರ ಹೋಗಿರಲಿಕ್ಕಿಲ್ಲ. ಎಲ್ಲಾ ಒಳದಾರಿಗಳ ಬಳಿಯೂ ನಾಕಾಬಂದಿ ಮಾಡಿ. ಅವರು ಸಿಗಲೇಬೇಕು. ಕೂಡಲೇ ಕೆಲಸ ಆಗ್ಬೇಕು. ಸಂಖ್ಯೆ ನೆನಪಿರಲಿ... ಎಮ್.ಎಚ್ 2847... ಥ್ಯಾಂಕ್ಸ್, ಡಿಸೋಜ."

ವೆಲೆಂಟೈನ್ ಡಿಸೋಜ! ವೃತ್ತ ನಿರೀಕ್ಷಕ ಡಿಸೋಜನೊಡನೆ ಕರಮಚಂದ ಹೇಳುತ್ತಿದ್ದುದು ಏನು? ನನ್ನ ಗೊಂದಲಗಳಿಗೆ ಬೆಲೆ ಕೊಡದೆ, ಕರಮಚಂದ ವಿಚಾರಿಸಿದ,

"ನೀನು ಹೋದ ಕೆಲಸವೇನಾಯಿತು?"

ನಾನು ಸಂಕ್ಷಿಪ್ತವಾಗಿ ನಡೆದುದನ್ನು ಬಣ್ಣಿಸಿದೆ.

"ಆದರೆ, ಇಲ್ಲೇಕೆ ಮದುವೆ ನಿಂತ ಹಾಗಿದೆ? ನೀನು ಡಿಸೋಜನಲ್ಲಿ ಏನು ಹೇಳ್ತಿದ್ದಿ?"